# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.4/2021

## ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಚಂದ್ರು ಎಂ. ಜೆ | CW: 16 | PW: 8 |
| ತಂದೆಯ ಹೆಸರು | : | ಎಂ. ಜಯಪ್ಪ | | |
| ವಯಸ್ಸು | : | 62 | | |
| ವೃತ್ತಿ | : | ನಿವೃತ್ತ ಪಿಎಸ್ ಐ | | |
| ವಾಸಸ್ಥಳ | : | ನ್ಯಾಮತಿ | | |

ದಿನಾಂಕಃ 04.05.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

## ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ಆಗಸ್ಟ್ 2017 ರಿಂದ ಮಾರ್ಚ್ 2024 ರವರೆಗೆ ನ್ಯಾಮತಿ ಪೊಲೀಸ್ ಠಾಣೆ ಯಲ್ಲಿ ಎಎಸ್ ಐ ಹಾಗೂ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.06.2020 ರಂದು ಚಾಸಾ – 15 ರವರಿಂದ ಕಡತವನ್ನು ಸ್ವೀಕರಿಸಿ ಚಾಸಾ 2, 8 ಮತ್ತು 9 ರವರ ಹೇಳಿಕೆಗಳನ್ನು ಹಾಗೂ ಚಾಸಾ 1 ರವರು ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 06.08.2020 ರಂದು ಆರೋಪಿ 2 ರಿಂದ 4 ರವರು ನಿರೀಕ್ಷಣಾ ಜಾಮೀನಿನ ಮೇಲೆ ಹಾಜರಾದ ಮೇರೆಗೆ ಠಾಣಾ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ದಿಃ 17.08.2020 ರಂದು ಚಾಸಾ 12 ರವರಿಂದ ಕೃತ್ಯ ಸ್ಥಳದ ದಾಖಲಾತಿ

ಪಡೆದುಕೊಂಡಿರುತ್ತೇನೆ. ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 13 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ 1 ರವರ 164 ಹೇಳಿಕೆಯನ್ನು ಹರಿಹರ ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇನೆ. ಆರೋಪಿಗಳ ವಿರುದ್ಧ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಆರೋಪಿಗಳು ಗೈರು ಹಾಜರಿದ್ದು ಆರೋಪಿಗಳ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ನಿಪಿ 9 ಗಾಯದ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಮನೆ ಸ್ಥಳ ತೆರಿಗೆ ವಿಧಿಸುವ ಪಟ್ಟಿಯ ಯಥಾ ನಕಲುಗಳನ್ನು ನಿಪಿ 10 ಮತ್ತು 11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು. 164 ಹೇಳಿಕೆಯನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಎನ್ ಎಸ್ ವಕೀಲರಿಂದಃ-

ದಿಃ 11.06.2020 ರಂದು ಚಾಸಾ - 15 ರವರಿಂದ ಕಡತವನ್ನು ಸ್ವೀಕರಿಸಿ ಚಾಸಾ 2, 8 ಮತ್ತು 9 ರವರ ಹೇಳಿಕೆಗಳನ್ನು ಹಾಗೂ ಚಾಸಾ 1 ರವರು ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 06.08.2020 ರಂದು ಆರೋಪಿ 2 ರಿಂದ 4 ರವರು ನಿರೀಕ್ಷಣಾ ಜಾಮೀನಿನ ಮೇಲೆ ಹಾಜರಾದ ಮೇರೆಗೆ ಠಾಣಾ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 17.08.2020 ರಂದು ಚಾಸಾ 12 ರವರಿಂದ ಕೃತ್ಯ ಸ್ಥಳದ ದಾಖಲಾತಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 13 ರವರಿಂದ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರ 164 ಹೇಳಿಕೆಯನ್ನು ಹರಿಹರ

ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಳ್ಳು ತನಿಖೆ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.